ವಿದ್ಯಾಭ್ಯಾಸದ ಇಲಾಖೆ.

ಪ್ರಕಟನ ಪತ್ರಿಕೆ.

ಸ್ಯ॥ 1896ನೇ ಇಸವಿ ಫಿಬ್ರವರಿ ತಾರೀಖು 18ನೇ D ನಂಬರು 44.

ಉಪಾಧ್ಯಾಯ ನಿರ್ಣಯ ಪತ್ರಿಕಾ ಪರೀಕ್ಷೆಗಳು.

1. ಉಪಾಧ್ಯಾಯ ನಿರ್ಣಯ ಪತ್ರಿಕಾ ಪರೀಕ್ಷೆಗಳು "ಅಪ್ಪರ್ ಸೆಕಂಡರಿ", "ಲೋವರ್ ಸೆಕಂಡರಿ", "ಪ್ರೈಮರಿ" ಎಂದು ಮೂರು ಅಂತಸ್ತುಗಳಾಗಿ (Grades) ವಿಂಗಡಿಸಲ್ಪಟ್ಟಿವೆ. ಈ ಪರೀಕ್ಷೆಗಳು ಮೈಸೂರಲ್ಲಿ ಜರ್ಜ್ ತಿಂಗಳು ನಡೆಯಿಸಲ್ಪಡುತ್ತವೆ.

2. ಈ ಪರೀಕ್ಷೆಗಳು ಬರಪದ ಪರೀಕ್ಷೆ (Written Examination), ವ್ಯವಹಾರಿಕ ಪರೀಕ್ಷೆ (Practical Test), ಎಂದು 2 ಭಾಗವಾಗಿವೆ. ಇವು ಇಂಗ್ಲೀಷಿನಲ್ಲಾಗಲಿ ಕನ್ನಡದಲ್ಲಾಗಲಿ ನಡೆಯಿಸಲ್ಪಡುತ್ತವೆ.

3. ಈ ಪರೀಕ್ಷೆಗೆ ಸೇರಬೇಕೆಂಬವರು ಮುಂದೆ ವಿವರಿಸುವ ಕನಿಷ್ಠ ವಿದ್ಯಾಯೋಗ್ಯತೆಯನ್ನು ಪಡೆದಿರುವುದಲ್ಲದೆ, (1) ಸರಕಾರದಿಂದ ಅಂಗೀಕೃತವಾದ ಯಾವದಾದರೂ ಬಂದು ನಾರ್ಮಲ್‌ಸ್ಕೂಲಿನಲ್ಲಿ ಸಂಪೂರ್ಣವಾದ ಶಿಕ್ಷಣವನ್ನು ಹೊಂದಿ ಪರೀಕ್ಷೆಗೆ ಹೋಗುವುದಕ್ಕೆ ಹೆಡ್ ಮಾಸ್ಟರ ಅನುಮತಿಯನ್ನು ಪಡೆದಿರಬೇಕು; (2) ಅಥವಾ ಸರಕಾರದಿಂದ ಅಂಗೀಕೃತವಾದ ಯಾವದಾದರೂ ಬಂದು ಸ್ಕೂಲಿನಲ್ಲಿ ದರಿದ್ರಪಕ್ಷ 3 ವರ್ಷ ಉಪಾಧ್ಯಾಯರಾಗಿದ್ದು ಒಬ್ಬ "ಇನ್‌ಸ್ಪೆಕ್ಟಿಂಗ್ ಆಫಿಸರಿಂದ" ತಾವು ಮಾಡಿದ ಕೆಲಸವು ಸುಮಾರಾಗಿ ತೃಪ್ತಿಕರವಾಗಿತ್ತು ಎಂಬ ಅಂಶಕ್ಕೆ ಒಂದು ನಿರ್ಣಯಪತ್ರಿಕೆ (ಸರ್ಟಿಫಿಕೇಟ್) ಯನ್ನು ಪಡೆದಿರಬೇಕು.

4. ಮತ್ತು ಪರೀಕ್ಷೆಗೆ ಸೇರಬೇಕೆಂಬವರು ಸರ್ಕಾರದ, ಮುನಿಸಿಪಾಲಿಟಿಯ ಅಥವಾ ದ್ರವ್ಯಸಹಾಯದ ಯಾವದಾದರೂ ಬಂದು ಸ್ಕೂಲಿನಲ್ಲಿ ಉಪಾಧ್ಯಾಯರಾಗಿ ಇಲ್ಲದೇ ಇದ್ದಪಕ್ಷದಲ್ಲಿ ತಮ್ಮ ವಯಸ್ಸು 15ಕ್ಕೆ ಹೆಚ್ಚು ಮತ್ತು 25ಕ್ಕೆ ಕಡವೆ ಎಂಬದಾಗಿಯೂ; ಏಕಬಿಡದೆ 3 ವರ್ಷಕ್ಕೆ ಕಡವೆ ಇಲ್ಲದೆ ಸರ್ಕಾರದ, ಮುನಿಸಿಪಾಲಿಟಿಯ, ಅಥವಾ ದ್ರವ್ಯಸಹಾಯದ, ಯಾವದಾದರೂ ಬಂದು ಸ್ಕೂಲಿನಲ್ಲಿ ತಾವು ಉಪಾಧ್ಯಾಯರಾಗಿದ್ದ ಪಕ್ಷದಲ್ಲಿ ತಮ್ಮ ವಯಸ್ಸು 35ಕ್ಕೆ ಕಡವೆ ಎಂಬದಾಗಿಯೂ; ಪ್ರಸಿದ್ಧನಾದ ಒಬ್ಬ ದೊಡ್ಡ ಮನುಷ್ಯನಿಂದ ಬಂದು ಪ್ರಮಾಣಪತ್ರಿಕೆ (ಸರಟಿಫಿಕೇಟ್) ಯನ್ನು ಕಳುಹಿಸಿಕೊಡಬೇಕು.

5. "ಈ ಪರೀಕ್ಷೆಗಳಿಗೆ ಸೇರಿಸಿಕೊಳ್ಳಬೇಕಾದರೆ ಅಪೇಕ್ಷಿತವಾದ ಕನಿಷ್ಠ ವಿದ್ಯಾಯೋಗ್ಯತೆ ಏನಂದರೆ:—

(1) "ಅಪ್ಪರ್ ಸೆಕಂಡರಿ" ಅಂತಸ್ತಿನ ಉಪಾಧ್ಯಾಯ ನಿರ್ಣಯಪತ್ರಿಕಾ ಪರೀಕ್ಷೆಗೆ; ಮೆಟ್ರಿಕ್ಯುಲೇಷನ್ ಪರೀಕ್ಷೆ, ದೇಶೀಯೋಪಾಧ್ಯಾಯ ಪರೀಕ್ಷೆ, ಅಪ್ಪರ್ ಸೆಕಂಡರಿ ಪರೀಕ್ಷೆ, ಇವುಗಳಲ್ಲಿ ಯಾವದಾದರೂ ಒಂದರಲ್ಲಿ ತೇರ್ಗಡೆಯಾಗಿರುವ ಬಗ್ಗೆ ನಿರ್ಣಯಪತ್ರಿಕೆ.

(2) "ಲೋವರ್ ಸೆಕಂಡರಿ" ಅಂತಸ್ತಿನ ಉಪಾಧ್ಯಾಯ ನಿರ್ಣಯಪತ್ರಿಕಾ ಪರೀಕ್ಷೆಗೆ; ಮೈಸೂರು ಲೋವರ್ ಸೆಕಂಡರಿ ಪರೀಕ್ಷೆ, ಹಿಂದೆ ಇದ್ದ ಮದ್ರಾಸು ಮಿಡಲ್‌ಸ್ಕೂಲ್ ಪರೀಕ್ಷೆ, ಇವುಗಳಲ್ಲಿ ಯಾವದಾದರೂ ಒಂದರಲ್ಲಿ ತೇರ್ಗಡೆಯಾಗಿರುವ ಬಗ್ಗೆ ನಿರ್ಣಯಪತ್ರಿಕೆ.

(3) "ಪ್ರೈಮರಿ" ಅಂತಸ್ತಿನ ಉಪಾಧ್ಯಾಯ ನಿರ್ಣಯಪತ್ರಿಕಾ ಪರೀಕ್ಷೆಗೆ; ದೇಶ ಭಾಷೆಯ ಮೂರನೇ ಸ್ಟ್ಯಾಂಡರ್ಡಿನ ಎಲ್ಲಾ ಪ್ರಕರಣಗಳಲ್ಲಿಯೂ, ತೇರ್ಗಡೆಯಾಗಿರುವಂತೆ ಡೆಪ್ಯುಟಿ ಇನ್‌ಸ್ಪೆಕ್ಟರ್ ರುಜು ಮಾಡಿರುವ ನಿರ್ಣಯಪತ್ರಿಕೆ.

6. ಬರಹದ ಪರೀಕ್ಷೆಯು ಜರ್ಜ್ ತಿಂಗಳ ಮೊದಲು ಸೋಮವಾರದ ದಿನ ಆರಂಭವಾಗಿ ಆ ದಿವಸದಲ್ಲಿಯೂ ಮುಂದಿನ ದಿವಸಗಳಲ್ಲಿಯೂ ನಡೆಯಿಸಲ್ಪಡುವದು.

7. ಬರಹದ ಪರೀಕ್ಷೆಗೆ ಅಪೇಕ್ಷಿತವಾದ ವಿಷಯಗಳು ಯಾವವೆಂದರೆ:—

ಅಪ್ಪರ್ ಸೆಕಂಡರಿ ಅಂತಸ್ತಿನ ಉಪಾಧ್ಯಾಯ ನಿರ್ಣಯಪತ್ರಿಕಾ ಪರೀಕ್ಷೆಗೆ—

(a). ಲೋವರ್ ಸೆಕಂಡರಿ ಮತ್ತು ಪ್ರೈಮರಿ ಸ್ಕೂಲ್‌ಗಳಲ್ಲಿ ಓದಬೇಕಾದ ವಿಷಯಗಳನ್ನು ಕಲಿಸುವ ಶಾಸ್ತ್ರ ಮತ್ತು ಅನುಭವ (The theory and practice of teaching), ಸಾಮಾನ್ಯವಾಗಿ ಮುಖತಃ ಬೋಧಿಸುವ ಪ್ರಕ್ರಿಯೆ (The art of oral teaching), ಯಾವುದಾದರೂ ಒಂದು ಕೊಟ್ಟ ವಿಷಯವನ್ನು ಪಾಠ ಹೇಳುವ ಟಿಪ್ಪಣಿ (Notes of a lesson on a given subject). 3 ಗಂಟೆಯ ಕಾಲದ ಒಂದು ಪತ್ರಿಕೆ. 120 ಅಂಕಗಳು.

(b). ಲೋವರ್ ಸೆಕಂಡರಿ ಮತ್ತು ಪ್ರೈಮರಿ ಸ್ಕೂಲುಗಳ ಸಂವಿಧಾನ (Organisation), ಸ್ಕೂಲ್ ರಿಜಿಸ್ಟ್ರರುಗಳ ಮಾದರಿ, ಅವುಗಳನ್ನು ಇಡುವ ಮತ್ತು ಅವುಗಳಿಂದ ಲೆಕ್ಕಗಳನ್ನು ತಯಾರ್ಮಾಡುವ ರೀತಿ, ಮತ್ತು ಸರ್ಕಾರೀ ಕಾಗದಗಳನ್ನು ಬರೆಯುವ ಸರಿಯಾದ ಕ್ರಮ. 3 ಗಂಟೆಯ ಕಾಲದ ಒಂದು ಪತ್ರಿಕೆ. 120 ಅಂಕಗಳು.

(c). ನೀತ್ಯನುಶಾಸನ ವಿಧಾನ (Principles of moral discipline), ಶೀಲಸ್ವಭಾವೋತ್ಪಾದನ (Formation of habits and character). $1\frac{1}{2}$ ಗಂಟೆಯ ಕಾಲದ ಒಂದು ಪತ್ರಿಕೆ. 60 ಅಂಕಗಳು.

ಲೋವರ್ ಸೆಕಂಡರಿ ಅಂತಸ್ತಿನ ಉಪಾಧ್ಯಾಯ ನಿರ್ಣಯಪತ್ರಿಕಾ ಪರೀಕ್ಷೆಗೆ—

(a). ಅಪ್ಪರ್ ಪ್ರೈಮರಿ ಸ್ಕೂಲ್‌ಗಳಲ್ಲಿ ಓದಬೇಕಾದ ವಿಷಯಗಳನ್ನು ಕಲಿಸುವ ಕ್ರಮಗಳು, ಸಾಮಾನ್ಯವಾಗಿ ಮುಖತಃ ಬೋಧಿಸುವ ಪ್ರಕ್ರಿಯೆ, ಮತ್ತು ಯಾವದಾದರೂ ಒಂದು ಕೊಟ್ಟ ವಿಷಯವನ್ನು ಪಾಠ ಹೇಳುವ ಟಿಪ್ಪಣಿ. 3 ಗಂಟೆಯಕಾಲದ ಒಂದು ಪತ್ರಿಕೆ. 180 ಅಂಕಗಳು.

(b). ಯಾವದಾದರೂ ಒಂದು ಪ್ರೈಮರಿ ಸ್ಕೂಲಿನ ಸಂವಿಧಾನ (Organisation), ಮತ್ತು ವ್ಯವಸ್ಥೆ (Discipline), ಸ್ಕೂಲ್ ರಿಜಿಸ್ಟ್ರರುಗಳ ಮಾದಿರಿ, ಅವುಗಳನ್ನು ಇಡುವ ಮತ್ತು ಅವುಗಳಿಂದ ಲೆಕ್ಕಗಳನ್ನು ತಯಾರ್ಮಾಡುವ ರೀತಿ. 2 ಗಂಟೆಯ ಕಾಲದ ಒಂದು ಪತ್ರಿಕೆ. 120 ಅಂಕಗಳು.

ಪ್ರೈಮರಿ ಅಂತಸ್ತಿನ ಉಪಾಧ್ಯಾಯ ನಿರ್ಣಯಪತ್ರಿಕಾ ಪರೀಕ್ಷೆಗೆ—

(a). ಸಾಮಾನ್ಯವಾಗಿ ಮುಖತಃ ಬೋಧಿಸುವ ಪ್ರಕ್ರಿಯೆ ಮತ್ತು ಯಾವದಾದರೂ ಒಂದು ಕೊಟ್ಟ ವಿಷಯವನ್ನು ಪಾಠ ಹೇಳುವ ಟಿಪ್ಪಣಿ. $1\frac{1}{2}$ ಗಂಟೆಯ ಕಾಲದ ಒಂದು ಪತ್ರಿಕೆ. 130 ಅಂಕಗಳು.

(b). ಸ್ಕೂಲ್ ರಿಜಿಸ್ಟ್ರರುಗಳ ಮಾದಿರಿ, ಅವುಗಳನ್ನು ಇಡುವ ಮತ್ತು ಅವುಗಳಿಂದ ಲೆಕ್ಕಗಳನ್ನು ತಯಾರ್ಮಾಡುವ ರೀತಿ. $1\frac{1}{2}$ ಗಂಟೆಯಕಾಲದ ಒಂದು ಪತ್ರಿಕೆ. 170 ಅಂಕಗಳು.

8. ಒಂದೊಂದು ಪತ್ರಿಕೆಗೂ ಕ್ಲಿಪ್ತ ಮಾಡಿರುವ ಪೂರ್ಣಾಂಕದಲ್ಲಿ ಶೇಕಡಾ 40ಕ್ಕೆ ಕಡಮೆ ಇಲ್ಲದೆ ಅಂಕಗಳನ್ನು ಪಡೆಯುವವರು ಪರೀಕ್ಷೆಯಲ್ಲಿ ತೇರ್ಗಡೆಯಾದಂತೆ ಭಾವಿಸಲ್ಪಡುವುದಿಲ್ಲ. ತೇರ್ಗಡೆಯಾದವರಲ್ಲಿ ಬಟ್ಟು ಅಂಕ ಸಂಖ್ಯೆಯಲ್ಲಿ ಶೇಕಡಾ 60ನ್ನು ಪಡೆದವರು ಮೊದಲನೇ ವರ್ಗದಲ್ಲಿಯೂ ಉಳಿದವರು ಎರಡನೇ ವರ್ಗದಲ್ಲಿಯೂ ಸೇರಿಸಲ್ಪಡುವರು.

9. ಬರಹದ ಪರೀಕ್ಷೆಗಳ ಫಲಿತಾಂಶವು ಪರೀಕ್ಷೆಗಳಾದ ಎರಡನೇ ಬುಧವಾರವನ್ನು ತಿಕ್ರಮಿಸದೆ ಪ್ರಕಟಿಸಲ್ಪಡುತ್ತದೆ.

10. ವ್ಯವಹಾರಿಕ ಪರೀಕ್ಷೆಯು ಬರಹದ ಪರೀಕ್ಷೆಗಳ ಆರಂಭಕ್ಕೆ ಮುಂದಿನ ಮೂರನೇ ಬುಧವಾರವನ್ನು ತಿಕ್ರಮಿಸದೆ ಮೈಸೂರು ನಾರ್ಮಲ್ ಸ್ಕೂಲಿನಲ್ಲಿ ನಡೆಯಿಸಲ್ಪಡುವುದು.

11. ವ್ಯವಹಾರಿಕ ಪರೀಕ್ಷೆಯು ಇಬ್ಬರು ಪರೀಕ್ಷಕರಿಗೆ ಕಡಮೆ ಇಲ್ಲದ ಒಂದು ಸಂಘದಿಂದ ನಡೆಯಿಸಲ್ಪಡುವುದು.

12. ಬರಹದ ಪರೀಕ್ಷೆಯಲ್ಲಿ ತೇರ್ಗಡೆಯಾಗದವರನ್ನು ವ್ಯವಹಾರಿಕ ಪರೀಕ್ಷೆಗೆ ಸೇರಿಸುವುದಿಲ್ಲ.

13. ವ್ಯವಹಾರಿಕ ಪರೀಕ್ಷೆಗೆ ಕೆಳಗೆ ಹೇಳುವ ಅಂಶಗಳು ಸೇರಿವೆ:—

(1). 30 ನಿಮಿಷಕಾಲಕ್ಕೆ ಕಡಮೆ ಇಲ್ಲದೆ ಮತ್ತು 45 ನಿಮಿಷಕಾಲಕ್ಕೆ ಮೀರದೆ, ಪರೀಕ್ಷಕನ ಸಂಘದ ದರಿದ್ರಪಕ್ಷ ಇಬ್ಬರು ಸಾಮಾಜಿಕರ ಎದುರಿಗೆ ಬಂದು ಪಾಠವನ್ನು ಹೇಳುವುದು. 250 ಅಂಕಗಳು.

(2). ಓದುವುದು. 40 ಅಂಕಗಳು.

(3). ಹಲಗೆಯ ಮೇಲೆ ಅಭ್ಯಾಸಗಳು (Black-board exercises). 70 ಅಂಕಗಳು.

ಇನ್ನೂ ಯಾವದಾದರೂ ಬಂದು ವಿಷೆಯದಲ್ಲಿ ಬಂದು ವರ್ಗಕ್ಕೆ ಪಾಠ ಹೇಳುವಂತೆ ಪರೀಕ್ಷ್ಯನನ್ನು (Candidate) ಕೇಳಬಹುದು.

14. ಪರೀಕ್ಷ್ಯನು ಪಾಠ ಹೇಳಬೇಕಾಗುವ ಕಾಲಕ್ಕೆ ಎರಡುದಿನ ಹಿಂದೆಯೇ ಪರೀಕ್ಷಕರು ಅವನಿಗೆ ಎರಡು ವಿಷಯಗಳನ್ನು ಕೊಡಬೇಕು. ಇವುಗಳಲ್ಲಿ ಅವನು ಯಾವನಾದರೂ ಬಂದನ್ನು ತಾನು ಪಾಠ ಹೇಳುವುದಕ್ಕೆ ಆರಿಸಿಕೊಳ್ಳಬಹುದು.

15. ಮೇಲೆ ಹೇಳಿರುವ ಬಂದೊಂದು ಪ್ರಕರಣದಲ್ಲಿಯೂ ಪೂರ್ಣಾಂಕದಲ್ಲಿ ಶೇಕಡಾ 33ನ್ನು ಪಡೆಯದವರು ವ್ಯವಹಾರಿಕ ಪರೀಕ್ಷೆಯಲ್ಲಿ ತೇರ್ಗಡೆಯಾದಂತೆ ಭಾವಿಸಲ್ಪಡುವುದಿಲ್ಲ. ತೇರ್ಗಡೆಯಾದವರಲ್ಲಿ ಒಟ್ಟು ಅಂಕ ಸಂಖ್ಯೆಯಲ್ಲಿ ಶೇಕಡಾ 60ನ್ನು ಪಡೆದವರು ಮೊದಲನೇ ವರ್ಗದಲ್ಲಿಯೂ ಉಳಿದವರು 2ನೇ ವರ್ಗದಲ್ಲಿಯೂ ಸೇರಿಸಲ್ಪಡುವರು.

16. ಯಾವದಾದರೂ ಬಂದು ಅಂತಸ್ತಿನ ಬರಹದ ಪರೀಕ್ಷೆಯಲ್ಲಿಯೂ ವ್ಯವಹಾರಿಕ ಪರೀಕ್ಷೆಯಲ್ಲಿಯೂ ತೇರ್ಗಡೆಯಾದವರು ಆ ಅಂತಸ್ತಿನ ಉಪಾಧ್ಯಾಯ ನಿರ್ಣಯಪತ್ರಿಕೆಯನ್ನು ಪಡೆಯುವರು.

ಅಪ್ಪರ್ ಸೆಕಂಡರಿ ಅಂತಸ್ತಿನ ಉಪಾಧ್ಯಾಯ ನಿರ್ಣಯಪತ್ರಿಕೆಯನ್ನು ಪಡೆದವರು ಲೋವರ್ ಸೆಕಂಡರಿ ವರ್ಗಗಳಲ್ಲಿ ಪಾಠ ಹೇಳುವುದಕ್ಕೆ ಅರ್ಹರಾಗುತ್ತಾರೆ.

ಲೋವರ್ ಸೆಕಂಡರಿ ಅಂತಸ್ತಿನ ಉಪಾಧ್ಯಾಯ ನಿರ್ಣಯಪತ್ರಿಕೆಯನ್ನು ಪಡೆದವರು ಅಪ್ಪರ್ ಪ್ರೈಮರಿ ವರ್ಗಗಳಲ್ಲಿ ಪಾಠ ಹೇಳುವುದಕ್ಕೆ ಅರ್ಹರಾಗುತ್ತಾರೆ.

ಪ್ರೈಮರಿ ಅಂತಸ್ತಿನ ಉಪಾಧ್ಯಾಯ ನಿರ್ಣಯಪತ್ರಿಕೆಯನ್ನು ಪಡೆದವರು ಲೋವರ್ ಪ್ರೈಮರಿ ವರ್ಗಗಳಲ್ಲಿ ಪಾಠ ಹೇಳುವುದಕ್ಕೆ ಅರ್ಹರಾಗುತ್ತಾರೆ.

17. ಉಪಾಧ್ಯಾಯ ನಿರ್ಣಯಪತ್ರಿಕಾ ಪರೀಕ್ಷೆಗಳಿಗೆ ಸೇರಬೇಕೆಂಬವರು ಮೈಸೂರು ದೇಶೀಯ ಪರೀಕ್ಷೆಗಳ ಮ್ಯಾನೇಜರಲ್ಲಿಗೆ, ಈ ಪರೀಕ್ಷೆಗಳಿಗೆ ಹಿಂದಿನ ಮಾರ್ಚಿ ಮೊದಲನೇ ತಾರೀಖನ್ನು ಅತಿಕ್ರಮಿಸದೆ ತಲಪುವಂತೆ, ದರಖಾಸ್ತುಗಳನ್ನು ಕಳುಹಿಸಬೇಕು.

18. ಈ ಪರೀಕ್ಷೆಗಳಿಗೆ ಸೇರಿಸಿಕೊಳ್ಳುವುದಕ್ಕಾಗಿ ಕೊಡತಕ್ಕ ವೇತನಗಳು (ಫೀಜುಗಳು):—

	ರೂಪಾಯಿ.
ಅಪ್ಪರ್ ಸೆಕಂಡರಿ ಅಂತಸ್ತಿಗೆ	4
ಲೋವರ್ ಸೆಕಂಡರಿ ಅಂತಸ್ತಿಗೆ	2
ಪ್ರೈಮರಿ ಅಂತಸ್ತಿಗೆ	2

ಬರಹದ ಪರೀಕ್ಷೆಯಲ್ಲಿ ತೇರ್ಗಡೆಯಾಗದವರು ಸಲಸಲಕ್ಕೂ ಅದೇ ವೇತನವನ್ನು ಕೊಟ್ಟು ಪುನಃ ಪರೀಕ್ಷೆಗಳಿಗೆ ಸೇರಬಹುದು.

ವ್ಯವಹಾರಿಕ ಪರೀಕ್ಷೆಯಲ್ಲಿ ತೇರ್ಗಡೆಯಾಗದವರು ಮೇಲೆ ಹೇಳಿರುವ ವೇತನಗಳಲ್ಲಿ ಅರ್ಧವನ್ನು ಕೊಟ್ಟು ಮತ್ತೆ ಅದೇ ಪರೀಕ್ಷೆಗೆ ಸೇರಬಹುದು.

ಎಚ್. ಜೆ. ಭಾಭಾ,
ಇನ್‌ಸ್ಪೆಕ್ಟರ್ ಜನರಲ್ ಆಫ್ ಎಜ್ಯುಕೇಷನ್.